‘ಓಕೆ’

‘ತಡೀರಿ, ನಾನು ನಿಮಗೆ ನಿಮ್ಮ ಕ್ಯಾಶ್ ತಂದು ಕೊಡ್ತೀನಿ’, ವಿಶಾಲ್ ಕ್ಯಾಶ್ ಕೌಂಟರ್ ಬಳಿಗೆ ಹೋಗಿ, ಅಲ್ಲಿ ಕೂತಿದ್ದ ಕ್ಯಾಶಿಯರ್‌ನಿಂದ ನೋಟುಗಳ ಕಟ್ಟುಗಳನ್ನು ತಂದು ಕೊಟ್ಟ. ನಾನು ಈ ಮೊದಲೇ ಕ್ಯಾಶ್ ಕೌಂಟರಿನಲ್ಲಿ ನನ್ನ ಚೆಕ್ ಜಮಾ ಮಾಡಿದ್ದೆ.

ಮರುದಿನ ನಾನು ವಿಶಾಲನನ್ನು ಭೇಟಿಯಾಗಲು ಹೋಗಬೇಕೋ, ಬೇಡವೋ ಎಂದು ಯೋಚಿಸಲಿಲ್ಲ. ನಾನು ಎರಡು ಗಂಟೆಗೆ ಸಿದ್ಧಳಾಗಲು ತೊಡಗಿದೆ. ಅರ್ಧ ಗಂಟೆಯಲ್ಲಿ ರೆಡಿಯಾಗಿ ಹೊರಟೆ. ಸಾಗರದ ಅಸ್ತವ್ಯಸ್ತ ಟ್ರಾಫಿಕ್‌ನಲ್ಲಿ ನಾನು ತುಂಬಾ ಎಚ್ಚರಿಕೆಯಿಂದ ಕಾರು ಚಾಲನೆ ಮಾಡುತ್ತಿದ್ದೆ. ವಾಹನವೊಂದು ಎದುರಿಗೆ ಬಂದರೆ, ಅಪಾಯ ಕಟ್ಟಿಟ್ಟ ಬುತ್ತಿ. ನಿಧಾನ ಚಾಲನೆ ಮಾಡಿಕೊಂಡು ಹೋದರೂ ಇಪ್ಪತ್ತು ನಿಮಿಷದಲ್ಲಿ ‘ಫೆಸ್ಟಿವ್’ಗೆ ಹೋದೆ. ನಿಶ್ಚಿತ ಸಮಯಕ್ಕೆ ಹತ್ತು ನಿಮಿಷಗಳ ಮೊದಲೇ ಅಲ್ಲಿದ್ದೆ. ವಿಶಾಲ್ ಸಹ ಬಂದಿದ್ದ.

‘ವಾಹ್! ನೀವು ಸಮಯವನ್ನು ಪಾಲಿಸುವವರು’ ಅವನು ಸಂತಸದಿಂದ ಹೇಳಿದ.

‘ಹತ್ತು ನಿಮಿಷ ಮೊದಲೇ ಬಂದಿದ್ದೇನೆ’, ನಾನು ಮುಗುಳ್ನಕ್ಕೆ.

ನಾವು ರೆಸ್ಟೋರೆಂಟಿನ ಒಳಗೆ ಹೋಗಿ ಕೂತೆವು. ಭಾನುವಾರವಾಗಿದ್ದರೂ ಆಗ ಅಲ್ಲಿ ಹೆಚ್ಚು ಜನರಿರಲಿಲ್ಲ. ಸಾಮಾನ್ಯವಾಗಿ ರಜದ ದಿನಗಳಲ್ಲಿ ಜನರ ದಿನಚರ್ಯೆ ಆಲಸಿಯಾಗುತ್ತದೆ. ಅವರು ತಡವಾಗಿ ನಿದ್ರಿಸಿ ತಡವಾಗಿ ಏಳುತ್ತಾರೆ. ತಡವಾಗಿ ಸ್ನಾನ ಇತ್ಯಾದಿಗಳನ್ನು ಮಾಡುತ್ತಾರೆ. ಒಂದು ವೇಳೆ ಅವರು ಊಟಕ್ಕೆ ಮನೆಯಿಂದ ಹೊರಗೆ ಹೋಗುವುದಿದ್ದರೆ, ಸಾಮಾನ್ಯವಾಗಿ ರಾತ್ರಿ ಊಟದ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ. ನಾವು ಕಿಟಕಿಯ ಬಳಿಯಿದ್ದ ಮೇಜನ್ನು ಆಯ್ಕೆ ಮಾಡಿಕೊಂಡಿದ್ದೆವು, ಅಲ್ಲಿಂದ ಲಾನ್ ಮತ್ತು ಪಾತಿಗಳು ಕಾಣಬರುತ್ತಿದ್ದವು. ಲಾನ್‌ನಲ್ಲಿ ಅಳಿಲುಗಳು ಓಡಾಡುತ್ತಿದ್ದವು.

‘ಏನು ತಗೋಳ್ತೀರ? ನಿಮಗಿಷ್ಟವಾದದ್ದನ್ನು ಆರ್ಡರ್ ಮಾಡಿ’, ವಿಶಾಲ್ ಮೆನುವನ್ನು ನನ್ನೆಡೆಗೆ ಸರಿಸಿದ.

‘ನಾನು ಮಸಾಲಾ ದೋಸೆ ತಗೊಳ್ತೀನಿ. ನೀವು?’

‘ನಾನೂ ಅದನ್ನೇ ತಗೊಳ್ತೀನಿ’

ವೇಟರ್, ವಿಶಾಲ್ ವೇಟರ್‌ನನ್ನು ಕರೆದ. ವೇಟರ್ ಬಂದ. ನಾವು ಅವನಿಗೆ ಆರ್ಡರ್ ಮಾಡಿ, ಮಾತುಕತೆಯನ್ನು ಆರಂಭಿಸಿದೆವು. ತಾನು ವಿವಾಹಿತ, ತನಗೆ ಇಬ್ಬರು ಮಕ್ಕಳಿದ್ದಾರೆ, ಆದರೆ ಹೆಂಡತಿಯೊಂದಿಗೆ ಹೊಂದಾಣಿಕೆ ಆಗಲ್ಲ ಎಂದು ವಿಶಾಲ್ ಹೇಳಿದ.



‘ಅವಳು ಅಬಕಾರಿ ಇಲಾಖೆಯಲ್ಲಿದ್ದಾಳೆ. ದೊಡ್ಡವರ ಮಗಳು. ಮದುವೆಯಾದ ನಂತರ ನನ್ನ ಮತ್ತು ಅವಳ ಸ್ಟೇಟಸ್ ಹೊಂದಾಣಿಕೆಯಾಗಲ್ಲ ಅಂತ ಅವಳಿಗೆ ಅನ್ನಿಸಿತು’, ವಿಶಾಲ್ ವಿವರಿಸಿದ.

‘ನೀವೇಕೆ ಬೇರೆಯಾಗಲಿಲ್ಲ? ಮಕ್ಕಳಿಗೆ ಏಕೆ ಜನ್ಮ ಕೊಟ್ಟಿರಿ?’ ನಾನು ನೇರವಾಗಿ ಕೇಳಿದೆ.

‘ನಮ್ಮ ತಂದೆ ತಾಯಿಗೆ, ಮಕ್ಕಳಾದ ನಂತರ ನಮ್ಮ ಸಂಬಂಧದಲ್ಲಿ ಸುಧಾರಣೆಯಾಗಬಹುದು ಎಂದು ಅನ್ನಿಸಿತು. ಆದ್ರೆ ಹೀಗಾಗಲಿಲ್ಲ. ನಾವೀಗ ವರ್ಷದಲ್ಲಿ ಒಂದೆರಡು ಬಾರಿ ಮಾತ್ರ ಭೇಟಿಯಾಗ್ತೀವಿ’, ವಿಶಾಲ್ ತನ್ನ ಜೀವನದ ಟ್ರಾಜಡಿಯನ್ನು ಹೇಳಿದ.

‘ಸಾರಿ ಟು ಸೆ, ನೀವು ನನ್ನ ಮಾತನ್ನು ಅಪಾರ್ಥ ಮಾಡಿಕೊಳ್ಳಬೇಡಿ. ಮಗುವನ್ನು ಹಡೆಯಿರಿ, ಆಗಲೇ ನಿಮ್ಮನ್ನು ಕೋಣೆಯಿಂದ ಹೊರಗೆ ಬಿಡಲಾಗುವುದು ಎಂದು ನಿಮ್ಮ ಅಪ್ಪ ಅಮ್ಮ ಬಲಾತ್ಕಾರವಾಗಿ ನಿಮ್ಮಿಬ್ಬರನ್ನು ಒಂದು ಕೋಣೆಯಲ್ಲಿ ಕೂಡಿ ಹಾಕಿರಲಿಲ್ಲ ತಾನೇ?’

‘ನೀವು ಹೇಳ್ತಿರೋದು ನಿಜ, ಮದುವೆಯಾದ ಮೇಲೆ ಅದನ್ನು ನಿಭಾಯಿಸಬೇಕೆಂದು ನಾನೂ ಬಯಸುತ್ತಿದ್ದೆ.’

‘ಮದುವೆಯಾಯ್ತು? ನೀವು ಮಾಡಿಕೊಳ್ಳಲಿಲ್ಲವೇ?’ ನಾನು ಮತ್ತೆ ತಡೆದೆ.

‘ಓಹ್! ನೀವು ಶಬ್ದಗಳನ್ನು ಹಿಡಿಯುತ್ತೀರ, ನೀವು ಎಷ್ಟಾದರು ಕವಯಿತ್ರಿ ಅಲ್ವಾ?’ ಎಂದ ವಿಶಾಲ್.

‘ನಾನು ಶಬ್ದಗಳನ್ನು ಹಿಡಿಯುತ್ತಿಲ್ಲ. ನೀವು ನಿಮ್ಮನ್ನು ಬಡಪಾಯಿ ಎಂದು ಸಾಬೀತು ಮಾಡಲು ಪ್ರಯತ್ನಿಸುತ್ತಿದ್ದೀರಲ್ಲ, ಆ ತಪ್ಪುಗಳನ್ನು ನಾನು ಹಿಡಿಯುತ್ತಿದ್ದೇನೆ.’

‘ನೀವು ಆಡಿಟರ್ ಅಲ್ಲ ತಾನೇ?’

‘ಇಲ್ಲ, ನಾನೊಬ್ಬ ಹೆಣ್ಣು, ಮಹಿಳೆ. ನೀವೆಂದೂ ಬಡಪಾಯಿಯಾಗುವುದೇ ಇಲ್ಲ ಎಂದು ನೆನಪಿಸಲು ಪ್ರಯತ್ನ ಮಾಡುತ್ತಿದ್ದೇನೆ’ ಎಂದೆ.

‘ನೀವು ತುಂಬಾ ಅಗ್ರೆಸಿವ್ ಮಹಿಳೆ’ ಎಂದ ವಿಶಾಲ್.

‘ಸಾರಿ’, ನನ್ನನ್ನು ಚಹಾಕ್ಕೆ ಆಹ್ವಾನಿಸಿದ ವ್ಯಕ್ತಿಯನ್ನು ಸರಿಯಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದೇನೆ ಎಂದು ಅನ್ನಿಸಿತು. ಆಗಲೇ ವೇಟರ್ ದೋಸೆ ತಂದ. ನಾವು ಮೌನ ವಹಿಸಿದೆವು. ವೇಟರ್ ಹೋದ ನಂತರ ನಾನು ಚರ್ಚೆಯ ದಿಕ್ಕನ್ನು ಹೊರಳಿಸುತ್ತಾ ಹೇಳಿದೆ, ‘ನೀವು ಅದೃಷ್ಟವಂತರು, ನಿಮಗೆ ನಾಸೀರುದ್ದೀನ್‌ರಂಥ ಮಹಾನ್ ಕಲಾಕಾರರೊಂದಿಗೆ ಕೆಲಸ ಮಾಡುವ ಅವಕಾಶ ಲಭಿಸಿದೆ’.

‘ಹೌದು, ಅದೊಂದು ಅದ್ಭುತ ಅನುಭವ. ನಾನು ಅವರೆದುರು ತುಂಬಾ ಸಣ್ಣ ಕಲಾಕಾರ. ನನ್ನ ರೋಲ್ ಸಹ ಚಿಕ್ಕದಿತ್ತು, ಆದ್ರೆ ರಿಹರ್ಸಲ್ ನಡುವೆ ಅವರು ನನ್ನನ್ನು ಪ್ರೋತ್ಸಾಹಿಸುತ್ತಿದ್ದರು. ಅವರು ನಿಜವಾಗಿ ಶ್ರೇಷ್ಠ ಕಲಾಕಾರರು’, ವಿಶಾಲ್ ನಾಸೀರುದ್ದೀನ್ ಶಾಹರನ್ನು ಪ್ರಶಂಸಿಸಿದ.

‘ನೀವು ಜೋಹರಾ ಸಹಗಲ್‌ರನ್ನು ಭೇಟಿಯಾಗಿದ್ದೀರ? ಅವರು ಲಖನೌ ಸಮೀಪದವರು, ರಾಮಪುರದವರು’ ನಾನು ಕೇಳಿದೆ. ಥಿಯೇಟರ್ ಬಗ್ಗೆ ಮಾತನಾಡುವಾಗ ವಿಶಾಲ್ ತುಂಬಾ ಉತ್ಸಾಹಿತನಾಗುತ್ತಿದ್ದ.

‘ಒಮ್ಮೆ ದಿಲ್ಲಿಯ ಎನ್.ಎಸ್.ಡಿ.ಯಲ್ಲಿ ಭೇಟಿಯಾಗಿದ್ದೇನೆ. ನಾನಲ್ಲಿಗೆ ಒಂದು ಶಿಬಿರದಲ್ಲಿ ಭಾಗವಹಿಸಲು ಹೋಗಿದ್ದೆ. ಅಂದು ಅಲ್ಲೊಂದು ಭಾಷಣದ ಕಾರ್ಯಕ್ರಮವಿತ್ತು. ಜೋಹರಾ ಅವರು ಬೇರೊಂದು ಕಾರಣಕ್ಕೆ ಅಲ್ಲಿಗೆ ಬಂದಿದ್ದರು. ಆಗ ನಾನು ಅವರನ್ನು ಭೇಟಿಯಾಗಿದ್ದೆ’ ಎಂದ ವಿಶಾಲ್. ನಾನು ವಿಶಾಲನ ಅನುಭವಗಳನ್ನು ಕೇಳಿ, ಥಿಯೇಟರ್‌ನವರಿಗೆ ಅದೆಷ್ಟು ದೊಡ್ಡದೊಡ್ಡ ವ್ಯಕ್ತಿಗಳನ್ನು ಭೇಟಿಯಾಗುವ ಅವಕಾಶ ಸಿಗುತ್ತದೆ, ಒಂದು ವೇಳೆ ನನಗೂ ನಟನೆ ಬಂದಿದ್ದರೆ ಎಂದು ಅನ್ನಿಸಿತು.

‘ನಿಮ್ಮ ಬಗ್ಗೆ ನನಗೆ ಅಸೂಯೆ ಆಗ್ತಿದೆ’ ಎಂದೆ.

‘ಏಕೆ?’

‘ನಿಮಗೆ ದೊಡ್ಡ ದೊಡ್ಡ ಕಲಾಕಾರರನ್ನು ಭೇಟಿಯಾಗುವ ಅವಕಾಶ ಲಭಿಸುತ್ತದೆ. ನಮ್ಮಂತಹವರು ಅವರನ್ನೆಲ್ಲಾ ಸಿನಿಮಾದ ಪರದೆಯಲ್ಲಿ ನೋಡ್ತೇವೆ ಅಥವಾ ಅವರ ಬಗ್ಗೆ ಕೇಳಿ ಸುಮ್ಮನಾಗ್ತೇವೆ’, ನಾನು ನಿಟ್ಟುಸಿರು ಬಿಡುತ್ತಾ ಹೇಳಿದೆ. ಇದನ್ನು ನಾನು ನಿಜವಾಗಿಯೂ ಹೇಳುತ್ತಿದ್ದೆ.

ನನ್ನ ಮಾತು ಕೇಳಿ ವಿಶಾಲ್ ನಕ್ಕ.

‘ನನಗೆ ನಟನೆಯನ್ನು ಕಲಿಸ್ತೀರ? ನಾನು ರಂಗವೇದಿಕೆಯೊಂದಿಗೆ ಕಲೆಯಬಹುದೇ?’ ನಾನು ಉತ್ಸುಕಳಾದೆ.

‘ದೊಡ್ಡದೊಡ್ಡ ಕಲಾಕಾರರನ್ನು ಭೇಟಿಯಾಗುವುದಕ್ಕಾ?’

‘ಹೀಗಂತಲೇ ತಿಳೀರಿ’

‘ನಿಮ್ಮ ಉದ್ದೇಶದಲ್ಲಿ ದೋಷವಿದೆ. ನೀವು ಎಲ್ಲರನ್ನು ಭೇಟಿಯಾದ ನಂತರ ಅಲ್ಲಿಂದ ಗಂಟು ಮೂಟೆ ಸಮೇತ ಹೊರಗೆ ಹೋಗ್ತೀರ’, ವಿಶಾಲ್ ಮತ್ತೆ ನಕ್ಕ.

‘ನನಗೆ ಅಲ್ಲಿಯೇ ಇರಲು ಮನಸ್ಸಾಗಬಹುದು’ ಎಂದೆ.

‘ಈ ಕೆಲಸ ಅಂದುಕೊಂಡಷ್ಟು ಸುಲಭವಲ್ಲ’

‘ನನಗೆ ಗೊತ್ತಿದೆ. ನಾನು ಸುಮ್ನೆ ನಿಮಗೆ ಹೇಳ್ತಿದ್ದೆ.’

‘ನೀವೆಂದಾದರು ನಾಟಕ ಮಾಡಿದ್ದೀರ?’

‘ಹೂಂ’

‘ಎಲ್ಲಿ? ಯಾವಾಗ?’

‘ಶಾಲೆಯಲ್ಲಿ. ಆಗ ನಾನು ಹತ್ತನೇ ತರಗತಿಯಲ್ಲಿ ಓದ್ತಿದ್ದೆ. ಆ ನಾಟಕ ಸಾಕ್ಷರತೆಗೆ ಸಂಬಂಧಿಸಿತ್ತು.’

‘ಬೇರೆ ಯಾವುದಾದ್ರು ನಾಟಕ?’

‘ಹೂಂ, ಈಗ ಸಾಮಾನ್ಯವಾಗಿ ಮಾಡ್ತೀನಿ.’

‘ಎಲ್ಲಿ?’ ವಿಶಾಲ್‌ಗೆ ನನ್ನ ಮಾತಿನಿಂದ ಆಶ್ಚರ್ಯವಾಯಿತು.

‘ನನ್ನ ಕಚೇರಿಯಲ್ಲಿ, ನಾನು ಕಚೇರಿಗೆ ಹೋಗಲು ತಡವಾದರೆ ಅಥವಾ ನಾನು ರಜವನ್ನು ಪಡೆಯಬೇಕಾದರೆ…’ ನಾನು ನಕ್ಕೆ.